ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017–18 ದಿನಾಂಕ:29–05–2017

# ಪತ್ರಿಕಾ ಆಮಂತ್ರಣ

1. **Meeting on GST (Goods and Services Tax)**

   **By**
   **Hasmuk Adhia, IAS.**
   **Revenue Secretary,**
   **Govt. of India.**

   **Date: 30-5-2017 , Tuesday, Time : 10.30 AM**

   **Place : Sir Puttanna Chetty Town Hall, J.C. Road, Bengaluru.**

2. ಟಿ. ಚೌಡಯ್ಯ ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಸಮಾರಂಭ

   ಪ್ರಶಸ್ತಿ ಪ್ರದಾನ:

   ಶ್ರೀಮತಿ ಉಮಾಶ್ರೀ,
   ಕನ್ನಡ ಮತ್ತು ಸಂಸ್ಕೃತಿ ಸಚಿವೆ

   ದಿನಾಂಕ: 30–05–2017 ಮಂಗಳವಾರ, ಸಮಯ: ಬೆಳಿಗ್ಗೆ 10.30 ಗಂಟೆಗೆ

   ಸ್ಥಳ: ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು.

# ಪತ್ರಿಕಾ ಪ್ರಕಟಣೆ

## ಮಾಜಿ ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರ 35ನೇ ಪುಣ್ಯ ಸ್ಮರಣೆ

ಬೆಂಗಳೂರು, ಮೇ 29 (ಕರ್ನಾಟಕ ವಾರ್ತೆ)

ಮಾಜಿ ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರ 35ನೇ ಪುಣ್ಯ ಸ್ಮರಣೆಯನ್ನು ಜೂನ್ 6 ರಂದು 10.30 ಗಂಟೆಗೆ ಆಚರಿಸಲಾಗುತ್ತಿದ್ದು, ಅಂದು ವಿಧಾನಸೌಧದ ಪಶ್ಚಿಮ ದ್ವಾರದಲ್ಲಿರುವ ದೇವರಾಜ ಅರಸು ಅವರ ಪ್ರತಿಮೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾಲಾರ್ಪಣೆ ಮಾಡಲಿದ್ದಾರೆ.

ಎಸ್‌ಎಂ/ಜೆಡಿ/ಜಿಪಿಆರ್.

## ಸರ್ಕಾರಿ ಗ್ರಂಥಾಲಯ ಮತ್ತು ಸಂಗ್ರಹಾಲಯಗಳಿಗಾಗಿ ಹಣಕಾಸು ನೆರವಿಗಾಗಿ ಅರ್ಜಿ ಆಹ್ವಾನ

ಬೆಂಗಳೂರು, ಮೇ 29 (ಕರ್ನಾಟಕ ವಾರ್ತೆ)

ಕರ್ನಾಟಕ ರಾಜ್ಯ ಪತ್ರಗಾರ ಇಲಾಖೆ 2017-18ನೇ ಸಾಲಿಗೆ ಹಸ್ತಪ್ರತಿಗಳು, ಅಪರೂಪದ ಪುಸ್ತಕಗಳು, ಹಳೆಯ ಮತ್ತು ಅಮೂಲ್ಯ ದಾಖಲೆಗಳು, ಐತಿಹಾಸಿಕ ದಾಖಲೆಗಳ ಸಂರಕ್ಷಣೆ ಹಾಗೂ ಸರ್ಕಾರಿ ಗ್ರಂಥಾಲಯ ಮತ್ತು ಸಂಗ್ರಹಾಲಯಗಳಿಗಾಗಿ ಹಣಕಾಸು ನೆರವಿಗಾಗಿ ಅರ್ಜಿ ಆಹ್ವಾನಿಸಿದೆ.

ರಾಷ್ಟ್ರೀಯ ಪತ್ರಾಗಾರ, ನವದೆಹಲಿ ಇವರು 2017-18 ಸಾಲಿಗೆ ಕೇಂದ್ರ ಹಣಕಾಸು ನೆರವಿನ ಯೋಜನೆಯಡಿ ಕರ್ನಾಟಕ ರಾಜ್ಯದಲ್ಲಿನ ಐತಿಹಾಸಿಕ ದಾಖಲೆಗಳ ಸಂರಕ್ಷಣೆ, ಹಸ್ತಪ್ರತಿಗಳು , ಅಪರೂಪದ ಪುಸ್ತಕಗಳು, ಅಮೂಲ್ಯ ದಾಖಲೆಗಳು ಐತಿಹಾಸಿಕ ದಾಖಲೆಗಳು, ಪತ್ರಾಗಾರಕ್ಕೆ ಯೋಗ್ಯವಾದ ಛಾಯಾಚಿತ್ರಗಳು, ಮುದ್ರಣಗಳನ್ನು ಜೋಪಾನ ಪಡಿಸುವಿಕೆ/ಸಂರಕ್ಷಿಸುವಿಕೆ, ದುರಸ್ತಿ, ಪ್ರಕಟಣೆ, ಪಟ್ಟಿ ಮಾಡುವಿಕೆ, ಮಾರ್ಗದರ್ಶಕಗಳ ಸಂಗ್ರಹಣೆ, ಮೈಕ್ರೋಫಿಲ್ಮಿಂಗ್ ಹಾಗೂ ಡಿಜಿಟೈಜ್ ಇವುಗಳ ದುರಸ್ತಿ ಮತ್ತು ನವೀಕರಣಗೊಳಿಸುವುದಕ್ಕಾಗಿ ಕಂಪ್ಯೂಟರ್ / ವ್ಯಾಕ್ಯೂಂಕ್ಲೀನರ್ / ಸ್ಕ್ಯಾನರ್ / ರೆಪ್ರೋಗ್ರಾಫಿ ಸಂರಕ್ಷಣೆಯಲ್ಲಿ ತೊಡಿಸಿಕೊಂಡಿರುವ ನೊಂದಾಯಿತ ಸ್ವಯಂ ಸಂಘ / ಸಂಸ್ಥೆಗಳು, ವ್ಯಕ್ತಿಗಳು, ವಿಶ್ವವಿದ್ಯಾಲಯಗಳು ಹಾಗೂ ಡೀಮ್ಡ್ ವಿಶ್ವವಿದ್ಯಾಲಯಗಳು ಅರ್ಜಿ ಸಲ್ಲಿಸಲಬಹುದಾಗಿದೆ.

ಈ ಯೋಜನೆಯುಡಿ ವಿಸ್ತರಿಸಬಹುದಾದ ಹಣಕಾಸು ನೆರವಿನ ಗರಿಷ್ಠ ಮಿತಿಯು ರೂ. 10.00 ಲಕ್ಷ (ಹತ್ತು ಲಕ್ಷ ಮಾತ್ರ) ವಾಗಿರುತ್ತದೆ ಮತ್ತು ಯೋಜನೆಯು ಒಟ್ಟು ವೆಚ್ಚದ 75:25 ಅನುಪಾತದಲ್ಲಿರುತ್ತದೆ. (ಅಂದರೆ ಕೇಂದ್ರ ಸರ್ಕಾರದ ಪಾಲು 75% ರಷ್ಟು ಮತ್ತು ಸಂಘ/ಸಂಸ್ಥೆಗಳ ಪಾಲು 25%.)

ನಿಗದಿತ ಅರ್ಜಿ ನಮೂನೆ ಹಾಗೂ ವಿವರಗಳಿಗೆ ರಾಷ್ಟ್ರೀಯ ಪತ್ರಾಗಾರ, ನವದೆಹಲಿಯ ಅಂತರ್ಜಾಲ **www.national archives.nic.in. Section Grants-in-aid on home page** ಹಾಗೂ **www.karnataka state archives.com** ನಿಂದ ಪಡೆದು ಭರ್ತಿಮಾಡಿ ಸಲ್ಲಿಸುವುದು.

ರಾಜ್ಯ ಮಟ್ಟದ ಶೋಧಕ ಸಮಿತಿಯು ಆಹ್ವಾನಿತ ಅರ್ಜಿಗಳನ್ನು ಪರಿಶೀಲಿಸಿ, ಸೂಕ್ತ ಆಯ್ಕೆ ಪಟ್ಟಿಯನ್ನು ಛೇರ್ಮನ್, ಗ್ರಾಂಟ್ಸ್ ಕಮಿಟಿ ಮತ್ತು ಡೈರಕ್ಟರ್ ಜನರಲ್ ನ್ಯಾಷನಲ್ ಆರ್ಕಿವ್ಸ್ ಆಫ್ ಇಂಡಿಯಾ, ಜನಪತ್, ನವದೆಹಲಿ – 110 001 ಇವರಿಗೆ ಕಳುಹಿಸಲಾಗುವುದು.

ನಿಗದಿತ ನಮೂನೆಯಲ್ಲಿರುವ ಅರ್ಜಿಗಳನ್ನು ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಮೊದಲನೇ ಮಹಡಿ, ಕೊಠಡಿ ಸಂ: 126, ವಿಕಾಸಸೌಧ, ಬೆಂಗಳೂರು –1 ಇವರಿಗೆ ಜೂನ್ 15 ರ ಸಂಜೆ 5.00 ಗಂಟೆಯೊಳಗೆ ತಲುಪಿಸುವುದು. ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ ಎಂದು ಪ್ರಕಟಣೆ ತಿಳಿಸಿದೆ.

ಎಸ್‌ಎಂ/ಜೆಡಿ/ಜಿಪಿಆರ್.

## ಶ್ರೀ ಪ್ರಸನ್ನ ವೀರಾಂಜನೇಯ ಸ್ವಾಮಿ ದೇವಾಲಯ – 41ನೇ ವಾರ್ಷಿಕೋತ್ಸವ ಕಾರ್ಯಕ್ರಮ

ಬೆಂಗಳೂರು, ಮೇ 29 (ಕರ್ನಾಟಕ ವಾರ್ತೆ)

ಬೆಂಗಳೂರು ನಗರದ ಮಹಾಲಕ್ಷ್ಮೀ ಬಡಾವಣೆಯಲ್ಲಿರುವ ಶ್ರೀ ಪ್ರಸನ್ನ ವೀರಾಂಜನೇಯ ಸ್ವಾಮಿ ದೇವಾಲಯದಲ್ಲಿ ಜೂನ್ 4 ರಿಂದ 9 ರವರೆಗೆ 41ನೇ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಆಚರಿಸಲಾಗುತ್ತಿದೆ.

ಕಾರ್ಯಕ್ರಮದ ದಿನಗಳಂದು ದೇವಾಲಯಕ್ಕೆ ಸಹಸ್ರಾರು ಸಂಖ್ಯೆಯಲ್ಲಿ ಭಕ್ತಾಧಿಗಳು ಆಗಮಿಸಿ ಶ್ರೀ ಪ್ರಸನ್ನ ವೀರಾಂಜನೇಯ ಸ್ವಾಮಿ ಹಾಗೂ ಶ್ರೀ ಪ್ರಸನ್ನ ಮಹಾಲಕ್ಷ್ಮೀ ಅಮ್ಮನವರ ದರ್ಶನವನ್ನು ಪಡೆಯಲಿದ್ದಾರೆ ಎಂದು ಕರ್ನಾಟಕ ಸರ್ಕಾರದ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

ಎಸ್‌ಎಂ/ಜೆಡಿ/ಜಿಪಿಆರ್.

## “ನೀರಿಗಾಗಿ ಅರಣ್ಯ”

## ಕೋಟಿ ವೃಕ್ಷ ನೆಡೋಣ–ಕೋಟಿ ಬೀಜ ಬಿತ್ತೋಣ: ಅಭಿಯಾನ

ಬೆಂಗಳೂರು, ಮೇ 29 (ಕರ್ನಾಟಕ ವಾರ್ತೆ)

ಅರಣ್ಯ ಇಲಾಖೆ “ ನೀರಿಗಾಗಿ ಅರಣ್ಯ’ ಎನ್ನುವ ಘೋಷವಾಕ್ಯದಡಿ ಪ್ರಸಕ್ತ ಸಾಲಿನಲ್ಲಿ ಆರು ಕೋಟಿ ಸಸಿಗಳನ್ನು ನೆಡುವ ಕಾರ್ಯಕ್ರಮದ ಜೊತೆಗೆ ಕೋಟಿ ಕೋಟಿ ಬೀಜವನ್ನು ಹೊತ್ತ ಮಣ್ಣಿನ ಉಂಡೆಗಳನ್ನು **(Seed Ball)** ಬಿತ್ತುವ ಕಾರ್ಯಕ್ರಮವನ್ನ ಹಮ್ಮಿಕೊಂಡಿದೆ.

ಜಲ ಮೂಲವನ್ನು ಕಾಪಾಡಿಕೊಂಡು ಬಂದಿರುವ ಅರಣ್ಯಗಳೆಂಬ ವೃಕ್ಷ ಸಮೂಹಗಳನ್ನು ರಕ್ಷಿಸಸದಿದ್ದಲ್ಲಿ ಮತ್ತು ಹೆಚ್ಚಿಸದಿದ್ದಲ್ಲಿ ಮನುಕುಲಕ್ಕೆ ಉಳಿಗಾವಿಲ್ಲ. “ನೀರಿಗಾಗಿ ಅರಣ್ಯ” ಆಂದೋಲನಕ್ಕೆ ಶಾಲಾ–ಕಾಲೇಜು ವಿದ್ಯಾರ್ಥಿಗಳ, ಸಂಘ–ಸಂಸ್ಥೆಗಳ, ಸಾರ್ವಜನಿಕರ ಚುನಾಯಿತ ಪ್ರತಿನಿಧಿಗಳ ಗಣ್ಯವ್ಯಕ್ತಿಗಳ ಸಹಕಾರ ಅತಿ ಅಗತ್ಯವಾಗಿದೆ. ಜಲ ಮೂಲದಿಂದ ಅರಣ್ಯವನ್ನು ಕಾಪಾಡುವ ಹಾಗೂ ವೃದ್ಧಿಸುವ ಕಾರ್ಯದಲ್ಲಿ ಸಾರ್ವಜನಿಕ ಸಹಭಾಗಿತ್ವ ಹಾಗೂ ಸಮೂಹ ಜವಾಬ್ದಾರಿಯನ್ನು ಜಾಗೃತಿಗೊಳಿಸುವ ಕಾರ್ಯಕ್ರಮವೂ ಇದಾಗಿದೆ.

ಬೃಹತ್ ಪ್ರಮಾಣದಲ್ಲಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಟಾನಗೊಳಿಸಲು ರಾಜ್ಯಾದ್ಯಂತ ಸ್ವಯಂಸೇವಕರನ್ನು ಆಯ್ಕೆಮಾಡಿ, ಅವರ ನೆರವಿನಿಂದ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಸಂಘ ಸಂಸ್ಥೆಗಳು ಹಾಗೂ ಸಾರ್ವಜನಿಕರು ಭಾಗವಹಿಸಲು ಪ್ರೇರೇಪಿಸಲಾಗುವುದು. ಪ್ರತಿಯೊಬ್ಬರು ಸ್ವಯಂಪ್ರೇರಿತರಾಗಿ ಭಾಗವಹಿಸಿ ಕರುನಾಡನ್ನು ತರುನಾಡನ್ನಾಗಿ ಮಾಡಿ ಇಡೀ ರಾಜ್ಯವನ್ನು ಹಚ್ಚ ಹಸಿರಿನಿಂದ ಸಿಂಗರಿಸಿ, ಹಳ್ಳ–ಕೊಳ್ಳ ಹಾಗೂ ನದಿಗಳು ವರ್ಷಪೂರ್ತಿ ಹರಿಯುವಂತೆ ಮಾಡುವ ಉನ್ನತ ಗುರಿಯನ್ನು ಈ ಆಂದೋಲನ ಹೊಂದಿದೆ.

ಜೂನ್ 10 ರೊಳಗೆ ಸ್ವಯಂ ಸೇವಕರು ಸಮೀಪದ ವಲಯ ಅರಣ್ಯಾಧಿಕಾರಿಗಳ ಕಚೇರಿಗಳಲ್ಲಿ ತಮ್ಮ ಹೆಸರುಗಳನ್ನು ನೊಂದಾಯಿಸಿಕೊಂಡು ಅರಣ್ಯ ಇಲಾಖಾ ಸಿಬ್ಬಂದಿಗಳ ಜೊತೆಗೂಡಿ ಬೀಜ ಸಂಗ್ರಹಿಸಿ, ಬೀಜಗಳನ್ನು ಮಣ್ಣಿನ ಉಂಡೆಗಳಲ್ಲಿ ಸೇರಿಸಿ ಈ ಮಳೆಗಾಲದಲ್ಲಿಯೇ ಬೀಜ ಹೊತ್ತ ಮಣ್ಣಿನ ಉಂಡೆಗಳನ್ನು ಸಮರೋಪಾದಿಯಲ್ಲಿ ಬಿತ್ತುವ ಬೃಹತ್ ಆಂದೋಲನದಲ್ಲಿ ಸಾರ್ವಜನಿಕರು ಭಾಗಿಯಾಗಬೇಕೆಂದು ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವ ಬಿ.ರಮಾನಾಥ್ ರೈ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಸ್‌ಎಂ/ಜೆಡಿ/ಜಿಪಿಆರ್.

## ರಾಜ್ಯ ಮಟ್ಟದ “ಶ್ರೇಷ್ಠ ಲೇಖಕ” ಪ್ರಶಸ್ತಿಗೆ ಲೇಖಕರ ಆಯ್ಕೆ

ಬೆಂಗಳೂರು, ಮೇ 29 (ಕರ್ನಾಟಕ ವಾರ್ತೆ)

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಕೃಷಿ, ವಿಜ್ಞಾನ ಮತ್ತು ವೈದ್ಯಕೀಯ ವಿಷಯಗಳಲ್ಲಿ ರಾಜ್ಯ ಮಟ್ಟದ ಶ್ರೇಷ್ಠ ಲೇಖಕ ಪ್ರಶಸ್ತಿಗಳನ್ನು ಪ್ರಕಟಿಸಿದೆ.

ಜನವರಿ 2015 ರಿಂದ ಡಿಸೆಂಬರ್ 2016 ರವರೆಗೆ ಕನ್ನಡದಲ್ಲಿ ಪುಸ್ತಕಗಳನ್ನು ಪ್ರಕಟಿಸಿರುವ ಲೇಖಕರು ಒಟ್ಟು 44 ಪುಸ್ತಕಗಳನ್ನು ಸಲ್ಲಿಸಿದ್ದರು. ಈ ಎಲ್ಲಾ ಪುಸ್ತಕಗಳನ್ನು ಪರಿಣಿತರಿಂದ ಮೌಲ್ಯಮಾಪನ ಮಾಡಿಸಲಾಗಿದ್ದು, 2017ನೇ ಸಾಲಿನಲ್ಲಿ ವಿಜ್ಞಾನ ಮತ್ತು ವೈದ್ಯಕೀಯ ವಿಷಯದಲ್ಲಿ ಎರಡು ಪ್ರಶಸ್ತಿಗಳನ್ನು ಹಾಗೂ ಕೃಷಿ ವಿಷಯದಲ್ಲಿ ಒಂದು ಪ್ರಶಸ್ತಿಯನ್ನು ನೀಡಲಾಗುತ್ತಿದೆ. ತಂತ್ರಜ್ಞಾನ ವಿಷಯದಲ್ಲಿ ಕಡಿಮೆ ಪುಸ್ತಕ ಸಲ್ಲಿಕೆಯಾಗಿದ್ದು, ಈ ವರ್ಷ ಯಾವುದೇ ಪ್ರಶಸ್ತಿಯನ್ನು ನೀಡಲಾಗುವುದಿಲ್ಲ.

ಆಯ್ಕೆಯಾದ ಲೇಖಕರಿಗೆ ಸನ್ಮಾನದೊಂದಿಗೆ ರೂ 25000/- ಪುರಸ್ಕಾರ ಮತ್ತು ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಗುವುದು. ಪ್ರಶಸ್ತಿ ಪ್ರದಾನ ಸಮಾರಂಭವನ್ನು ಮುಂದಿನ ತಿಂಗಳಲ್ಲಿ ಹಮ್ಮಿಕೊಳ್ಳಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

**ವಿಜ್ಞಾನ ವಿಷಯದಲ್ಲಿ** – ಡಾ. ಪಾಲಹಳ್ಳಿ ವಿಶ್ವನಾಥ ಅವರ "ಶತಮಾನದ ಪುರುಷ ಐನ್‌ಸ್ಟೈನ್" ಇವರು ವಿಶ್ರಾಂತ ಪ್ರಾಧ್ಯಾಪಕರು, ಟಾಟಾ ಇನ್ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್, ಮುಂಬಯಿ ಹಾಗೂ ಪ್ರೊ. ಆರ್. ವೇಣುಗೋಪಾಲ್ ಮತ್ತು ಡಾ. ಬಿ.ಎಸ್. ಜೈಪ್ರಕಾಶ್ "ರಸಾಯನ ವಿಜ್ಞಾನ ಬೆಳೆದ ಹಾದಿ" – ಕ್ರಮವಾಗಿ ಪ್ರೊ. ಆರ್. ವೇಣುಗೋಪಾಲ್, ವಿಶ್ರಾಂತ ಪ್ರಾಧ್ಯಾಪಕರು, ರಸಾಯನ ವಿಜ್ಞಾನ ವಿಭಾಗ, ವಿಶ್ವೇಶ್ವರರ ವಿಜ್ಞಾನ ಕಾಲೇಜು, ಬೆಂಗಳೂರು ಹಾಗೂ ಡಾ. ಬಿ.ಎಸ್. ಜೈಪ್ರಕಾಶ್, ವಿಶ್ರಾಂತ ಪ್ರಾಧ್ಯಾಪಕರು, ರಸಾಯನ ವಿಜ್ಞಾನ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

**ಕೃಷಿ ವಿಷಯದಲ್ಲಿ** – ಡಾ. ಎಸ್. ಎಸ್. ಕುಮಾರಸ್ವಾಮಿ ಅವರ "ಅಂತರ್ಜಲ ಬಳಕೆ" – ವಿಶ್ರಾಂತ ಶಿಕ್ಷಣ ನಿರ್ದೇಶಕರು, ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯ- ಶಿವಮೊಗ್ಗ.

**ವೈದ್ಯಕೀಯ ವಿಷಯದಲ್ಲಿ** – ಡಾ. ಶ್ರೀನಿವಾಸ ಕಕ್ಕಿಲ್ಲಾಯ ಬೇವಿಂಜೆ "ಆರೋಗ್ಯ ಆಶಯ" – ಹೆಸರಾಂತ ತಜ್ಞ ವೈದ್ಯರು – ಮಂಗಳೂರು ಹಾಗೂ ಡಾ. ನಾಗೇಶ್ ಕುಮಾರ್ ಜಿ. ರಾವ್ "ನ್ಯಾಯ ವೈದ್ಯಶಾಸ್ತ್ರ ಮರಣೋತ್ತರ ಶವಪರೀಕ್ಷೆ" – ವಿಶ್ರಾಂತ ವಿಭಾಗ ಮುಖ್ಯಸ್ಥರು/ನಿರ್ದೇಶಕರು, ಫೊರೆನ್ಸಿಕ್ ಮೆಡಿಸಿನ್ ವಿಭಾಗ, ಕಸ್ತೂರ್‌ಬಾ ವೈದ್ಯಕೀಯ ಮಹಾವಿದ್ಯಾಲಯ, ಮಣಿಪಾಲ.

## ಸಂಕಷ್ಟದಲ್ಲಿರುವ ಪತ್ರಕರ್ತರ ಮಾಸಾಶನ ರೂ. 10,000 ಕ್ಕೆ ಹೆಚ್ಚಳ

**ಬೆಂಗಳೂರು, ಮೇ 29 (ಕರ್ನಾಟಕ ವಾರ್ತೆ)**

**ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಸ್ತುತ ವರ್ಷದ ಆಯವ್ಯಯದಲ್ಲಿ ಘೋಷಿಸಿದಂತೆ ಸಂಕಷ್ಟದಲ್ಲಿರುವ ಪತ್ರಕರ್ತರ ಮಾಸಾಶನವನ್ನು ರೂ 8,000 ಗಳಿಂದ ರೂ. 10,000/- ಹೆಚ್ಚಿಸಿ, ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರ ಆದೇಶ ಹೊರಡಿಸಿದೆ.**

**ಎಸ್‌ಎಂ/ಜೆಡಿ/ಜಿಪಿಆರ್.**